# ಉಪ ತಹಶೀಲ್ದಾರರು, ನಾಡ ಕಾರ್ಯಾಲಯ, ಹಿರೇಹಡಗಲಿಯಲ್ಲಿ

| ಅರ್ಜಿದಾರರು | ತಕರಾರುದಾರರು |
|---|---|
| ಜಗದೀಶಪ್ಪ ಪವಾಡಶೆಟ್ರು ತಂದೆ ಚನ್ನಮಲ್ಲಪ್ಪ,<br>ಮೈಲಾರ ಗ್ರಾಮ, ಹಡಗಲಿ ತಾ.<br>{ಶೀ ಹೆಚ್.ನಾಗೇಶ, ವಕೀಲರು, ಹಡಗಲಿ} | ಲಿಂಗರಾಜ ತಂದೆ ಪುಟ್ಟಪ್ಪ ಪವಾಡಶೆಟ್ರು,<br>ಮೈಲಾರ ಗ್ರಾಮ, ಹಡಗಲಿ ತಾ. |

ವಿವಾದಿತ ಜಮೀನಿನ ವಿವರ:-

| ಕ್ರ.ಸಂ. | ಗ್ರಾಮದ ಹೆಸರು | ಸ.ನಂ. | ವಿಸ್ತೀರ್ಣ | ತರಹೆ |
|---|---|---|---|---|
| 1. | ಮೈಲಾರ | 273/ಎ/1 | 4-97 | ಖುಷ್ಕಿ |

*****

ಪೀಠಿಕೆ:-

ಬಳ್ಳಾರಿ ಜಿಲ್ಲೆ ಹೂವಿನಹಡಗಲಿ ತಾಲೂಕಿನ ಮೈಲಾರ ಗ್ರಾಮದ ಸ.ನಂ.273/ಎ/1 ವಿ:4-97 ಎಕ್ರೆ ಜಮೀನಿಗೆ ಸಂಬಂಧಿಸಿದಂತೆ, ಮೈಲಾರ ಗ್ರಾಮದ ನಿವಾಸಿಯಾದ ಜಗದೀಶಪ್ಪ ಪವಾಡಶೆಟ್ರು ರವರು ಪೌತಿ ವಾರಸಾ ಪ್ರಕಾರ ಹಕ್ಕು ಬದಲಾವಣೆ ಮಾಡಲು ಅರ್ಜಿಯನ್ನು ದಿನಾಂಕ 07-04-2014 ರಂದು ಸಲ್ಲಿಸಿರುತ್ತಾರೆ. ಗ್ರಾಮದಲ್ಲಿ ನಮೂನೆ-21 ರ ನೋಟೀಸು ದಿನಾಂಕ 22-04-2014 ಜಾರಿ ಮಾಡಲಾಗಿ, ನಿಗದಿತ ಅವಧಿಯೊಳಗೆ ಅಂದರೆ ದಿನಾಂಕ 13-05-2014 ರಂದು ಮೈಲಾರ ಗ್ರಾಮದ ಲಿಂಗರಾಜ ತಂದೆ ಪುಟ್ಟಪ್ಪ ಪವಾಡಶೆಟ್ರು ರವರು ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಕಾರಣ ಎಂ.ಆರ್.ನಂ.45/2013-14 ರ ಕಡತವು ತಕರಾರು ಕಡತವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು, ಹಿರೇಹಡಗಲಿ ರವರು ಈ ಕಾರ್ಯಾಲಯಕ್ಕೆ ವರದಿ ಮಾಡಿರುತ್ತಾರೆ. ಉಭಯ ಪಕ್ಷದವರಿಗೆ ಕೇಳಿಕೊಳ್ಳುವ ಅವಕಾಶ ನೀಡಿ ದಿ:04-09-2014 ಕ್ಕೆ ವಿಚಾರಣೆಗೆ ಹಾಜರಾಗಲು ನೋಟೀಸ್ ನೀಡಲಾಯಿತು.

ಪ್ರಕರಣದ ವಿಚಾರಣೆಗೆ ಅರ್ಜಿದಾರರು ಮತ್ತು ತಕರಾರುದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ವಿಚಾರಣೆಗೆ ಹಾಜರಾಗಿ ಇ-ಸ್ಟ್ಯಾಂಪ್‌ನಲ್ಲಿ ವಾರಸಾ ಪಾಲು ವಿಭಾಗ ಹಿಸ್ಸಾ ಪತ್ರದ ಪ್ರತಿಯನ್ನು ಸಲ್ಲಿಸುತ್ತಾ, ತಾವುಗಳು ವಾರಸಾ ಪ್ರಕಾರ ಪಾಲು ವಿಭಾಗ ಮಾಡಿಕೊಂಡಿದ್ದು, ಅದರಂತೆ ಹೊಸದಾಗಿ ಅರ್ಜಿ ಸಲ್ಲಿಸುವುದಾಗಿ ಮತ್ತು ಸದರಿ ಪ್ರಕರಣವನ್ನು ಇಲ್ಲಿಗೆ ಕೈ ಬಿಡಲು ಕೋರಿರುತ್ತಾರೆ.

ಅರ್ಜಿದಾರರು ಮತ್ತು ತಕರಾರುದಾರರು ಸಲ್ಲಿಸಿದ ಹೇಳಿಕೆ ಮತ್ತು ದಾಖಲೆಗಳನ್ನು ಪರಿಶೀಲಿಸಲಾಯಿತು. ತಕರಾರುದಾರರು ತಮಗೂ ಹಿಸ್ಸಾ ಇರುತ್ತದೆ ಎಂದು ವಿಚಾರಣೆ ವೇಳೆ ಮೌಖಿಕವಾಗಿ ತಿಳಿಸುತ್ತಾ, ತಕರಾರು ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ. ಅರ್ಜಿದಾರರು ದಿ:19-10-2015 ರಂದು ಹಾಜರಾಗಿ, ಇ-ಸ್ಟ್ಯಾಂಪ್‌ನಲ್ಲಿ ವಾರಸಾ ಪಾಲು ವಿಭಾಗ ಹಿಸ್ಸಾ ಪತ್ರದ ಪ್ರತಿಯನ್ನು ಸಲ್ಲಿಸುತ್ತಾ, ತಾವುಗಳು ವಾರಸಾ ಪ್ರಕಾರ ಪಾಲು ವಿಭಾಗ ಮಾಡಿಕೊಂಡಿದ್ದು, ಅದರಂತೆ ಹೊಸದಾಗಿ ಅರ್ಜಿ ಸಲ್ಲಿಸುವುದಾಗಿ ಮತ್ತು ಸದರಿ ಪ್ರಕರಣವನ್ನು ಇಲ್ಲಿಗೆ ಕೈ ಬಿಡಲು ಕೋರಿರುತ್ತಾರೆ. ಅರ್ಜಿದಾರರು ಸಲ್ಲಿಸಿದ ವಂಶವೃಕ್ಷ ಪ್ರತಿಯಲ್ಲಿ ಚನ್ನಮಲ್ಲಪ್ಪ ಪವಾಡಶೆಟ್ರು ಮತ್ತು ಸುಶೀಲಮ್ಮ ಇವರಿಗೆ 1)ಪುಟ್ಟಪ್ಪ, 2)ಜಗದೀಶಪ್ಪ ಮತ್ತು 3)ರಾಜಶೇಖರಪ್ಪ ಇವರು ಮಕ್ಕಳು. ಹಾಲಿ ಪಹಣಿಯು ರಾಜಶೇಖರಪ್ಪನ ಹೆಂಡತಿಯಾದ ಪಿ.ವಿಜಯ ಇವರ ಹೆಸರಿಗೆ ಇರುತ್ತದೆ. ವಿಜಯ ಮತ್ತು ರಾಜಶೇಖರಪ್ಪ ಇವರಿಬ್ಬರು ಮರಣ ಹೊಂದಿದ್ದು, ಮಕ್ಕಳು ಇರುವುದಿಲ್ಲ. ತಕರಾರುದಾರರು ಪುಟ್ಟಪ್ಪ ಇವರ ಮಗನಾಗಿರುತ್ತಾರೆ. ಅರ್ಜಿದಾರರು ತಮ್ಮ ಒಬ್ಬರೇ ಹೆಸರಿಗೆ ಹಕ್ಕು ಬದಲಾವಣೆ ಮಾಡಿಕೊಳ್ಳಲು ಅರ್ಜಿ ಸಲ್ಲಿಸಿರುತ್ತಾರೆ. ಮೇಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಲಾಗಿ, ಜಗದೀಶಪ್ಪ ಮತ್ತು ಪುಟ್ಟಪ್ಪ ಮತ್ತು ಅವರ ಮಕ್ಕಳು ಹತ್ತಿರದ ವಾರಸುದಾರರಾಗಿರುತ್ತಾರೆ ಮತ್ತು ಸಮಾನ ಹಕ್ಕು ಹೊಂದಿರುತ್ತಾರೆ. ಆದ್ದರಿಂದ ಈ ಕೆಳಕಂಡಂತೆ ಆದೇಶ.

ಸಂ/ಕಂ/ಪಹಣಿ/ವಿವಾದ/15/2014-15

ದಿನಾಂಕ:17-10-2016.

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಅಂಶಗಳು ಹಾಗೂ ಕಾರಣಗಳ ಹಿನ್ನೆಲೆಯಲ್ಲಿ ಎಂ.ಆರ್.ನಂ.45/2013-14 ರ ಪ್ರಕರಣದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಲು ಆದೇಶಿಸಿದೆ.

ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ
ಹಿರೇಹಡಗಲಿ

ಪ್ರತಿಯನ್ನು

1. ವಾದಿ ಮತ್ತು ಪ್ರತಿವಾದಿಗಳಿಗೆ
2. ಭೂಮಿ ಕೇಂದ್ರ, ತಾಲೂಕು ಕಛೇರಿ, ಹೂವಿನಹಡಗಲಿ ಇವರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
3. ಕಛೇರಿ ಕಡತಕ್ಕೆ ಶುದ್ಧಪ್ರತಿ.